# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **970** |
| ಸದಸ್ಯರ ಹೆಸರು | : | ಶ್ರೀ ಹೆಚ್. ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 15-12-2025 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

* * *

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಗೃಹ ಜ್ಯೋತಿ ಯೋಜನೆಯಲ್ಲಿ ಎಷ್ಟು ಯುನಿಟ್ ಉಚಿತ ಕರೆಂಟ್ ನೀಡಲಾಗುತ್ತಿದೆ; (ವಿವರ ನೀಡುವುದು); | ಗೃಹ ಜ್ಯೋತಿ ಯೋಜನೆಯ ಸೌಲಭ್ಯ ಪಡೆಯುತ್ತಿರುವ ಗ್ರಾಹಕರಿಗೆ ಈ ಕೆಳಕಂಡಂತೆ ಉಚಿತ ವಿದ್ಯುತ್ ನೀಡಲಾಗುತ್ತಿದೆ.<br><br>1. ಗ್ರಾಹಕರ 2022-23 ನೇ ಸಾಲಿನ ವಾರ್ಷಿಕ ಬಳಕೆಯ (12 ತಿಂಗಳ) ಸರಾಸರಿ ಯೂನಿಟ್‌ಗಳು + ಶೇ.10 ರಷ್ಟು ಸೇರಿ ಮಾಸಿಕ ಗರಿಷ್ಠ 200 ಅರ್ಹತಾ ಯೂನಿಟ್‌ಗಳು.<br>2. ಭಾಗ್ಯ ಜ್ಯೋತಿ ಮತ್ತು ಕುಟೀರ ಜ್ಯೋತಿ ಯೋಜನೆಯಡಿಯ ಸ್ಥಾವರಗಳಿಗೆ ಮಾಸಿಕ 58 ಯೂನಿಟ್‌ಗಳು.<br>3. ಅಮೃತ ಜ್ಯೋತಿ ಯೋಜನೆಯಡಿಯ ಸ್ಥಾವರಗಳಿಗೆ ಮಾಸಿಕ 83 ಯೂನಿಟ್‌ಗಳನ್ನು ಅರ್ಹತಾ ಯೂನಿಟ್‌ಗಳು.<br>4. ಗೃಹ ಬಳಕೆ ಪ್ರವರ್ಗದ ಗ್ರಾಹಕರಲ್ಲಿ ಮಾಸಿಕ 48 ಯೂನಿಟ್‌ಗಳಿಗಿಂತ ಕಡಿಮೆ ವಿದ್ಯುತ್ ಬಳಸುವ ಸ್ಥಾವರಗಳಿಗೆ 58 ಅರ್ಹತಾ ಯೂನಿಟ್‌ಗಳು.<br>5. 2022-23 ರ ಸಾಲಿನ ಪೂರ್ಣ ವಾರ್ಷಿಕ ಬಳಕೆ ಲಭ್ಯವಿಲ್ಲದ ಹಾಗೂ ಸರ್ಕಾರದ ಆದೇಶ ದಿನಾಂಕ: 05.06.2023 ರ ನಂತರ ವಿದ್ಯುತ್ ಸಂಪರ್ಕ ಹೊಂದಿದ ಗೃಹಗಳಿಗೆ ಮಾಸಿಕವಾಗಿ 58 ಯೂನಿಟ್‌ಗಳು. |
| ಆ) | ಬೆಂಗಳೂರು ನಗರ ಜಿಲ್ಲೆಗೆ ಎಷ್ಟು ಯುನಿಟ್ ಉಚಿತ ಕರೆಂಟ್ ನೀಡಲಾಗುತ್ತಿದೆ; | ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯ ಬೆಂಗಳೂರು ನಗರ ಜಿಲ್ಲೆಯಲ್ಲಿ ಗೃಹಜ್ಯೋತಿ ಯೋಜನೆಯಡಿ ವಿದ್ಯುತ್ ಬಳಕೆಯ ವಿವರಗಳು ಕೆಳಗಿನಂತಿವೆ: |

| ಜಿಲ್ಲೆ ಹೆಸರು | ಬಳಕೆಯಾದ ವಿದ್ಯುತ್ (ಮಿ.ಯೂ ಗಳಲ್ಲಿ) | | | ಒಟ್ಟು |
|---|---|---|---|---|
| | ಆರ್ಥಿಕ ವರ್ಷ 2023-24 (ಆಗಸ್ಟ್-2023 ರಿಂದ) | ಆರ್ಥಿಕ ವರ್ಷ 2024-25 | ಆರ್ಥಿಕ ವರ್ಷ 2025-26 (ಅಕ್ಟೋಬರ್-2025ರ ವರೆಗೆ) | |
| ಬೆಂಗಳೂರು ನಗರ | 1789.48 | 3030.69 | 1734.89 | |

| | ಪ್ರಶ್ನೆ | ಉತ್ತರ |
|---|---|---|
| ಇ) | ಈ ಯೋಜನೆಗೆ ಪ್ರತಿ ತಿಂಗಳು ಬಳಕೆಯಾಗುತ್ತಿರುವ ವಿದ್ಯುತ್ ಎಷ್ಟು; ಅದಕ್ಕೆ ತಗಲುತ್ತಿರುವ ವೆಚ್ಚವೆಷ್ಟು; | ಗೃಹ ಜ್ಯೋತಿ ಯೋಜನೆಯಡಿ ಪ್ರತಿ ತಿಂಗಳು ಬಳಕೆಯಾಗುತ್ತಿರುವ ವಿದ್ಯುತ್ ಪ್ರಮಾಣ ಮತ್ತು ಅದಕ್ಕೆ ಸರ್ಕಾರ ಭರಿಸುತ್ತಿರುವ ವೆಚ್ಚದ ಮಾಹಿತಿಯನ್ನು **ಅನುಬಂಧ-1** ರಲ್ಲಿ ಒದಗಿಸಲಾಗಿದೆ. |
| ಈ) | ಗೃಹ ಜ್ಯೋತಿ ಯೋಜನೆಯಲ್ಲಿ ಯಾವ ಯಾವ ನಿಗಮಗಳಿಗೆ ಎಷ್ಟು ಅನುದಾನ ನೀಡಲಾಗಿದೆ; (ವಿವರ ನೀಡುವುದು | ಗೃಹ ಜ್ಯೋತಿ ಯೋಜನೆ ಪ್ರಾರಂಭವಾದ ಆಗಸ್ಟ್-2023 (ಜುಲೈ-2023 ರ ಬಳಕೆ) ರಿಂದ ಡಿಸೆಂಬರ್-2025 ರವರೆಗೆ ಸರ್ಕಾರ ವಿದ್ಯುತ್ ಸರಬರಾಜು ಕಂಪನಿಗಳಿಗೆ ಒದಗಿಸಿರುವ ಸಹಾಯಧನ ಮೊತ್ತದ ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಲಾಗಿದೆ. |

| | | |
|---|---|---|
| ಉ) | ರೈತರು ತಮ್ಮ ಜಮೀನಿಗೆ ಟ್ರಾನ್ಸ್‌ಫಾರಂ ಅಳವಡಿಸಲು ಸರ್ಕಾರಕ್ಕೆ ಕಟ್ಟಬೇಕಾದ ಮೊತ್ತ ಎಷ್ಟು; ಅದರ ಮಾನದಂಡಗಳೇನು? (ವಿವರ ನೀಡುವುದು) | 1. ವಿದ್ಯುತ್ ಜಾಲದಲ್ಲಿ ಹಾಲಿ ಇರುವ ಟ್ರಾನ್ಸ್‌ಫಾರ್ಮರಗಳು ವಿಫಲಗೊಂಡರೆ ಆಯಾಯ ಎಸ್ಕಾಂಗಳಿಂದಲೇ ಉಚಿತವಾಗಿ ಬದಲಾವಣೆ ಮಾಡಿ ಅಳವಡಿಸಲಾಗುವುದು.<br><br>2. ಅಕ್ರಮ-ಸಕ್ರಮ ಯೋಜನೆಯಲ್ಲಿ ಈಗಾಗಲೇ ನೋಂದಣಿಗೊಂಡು ವಿದ್ಯುತ್ ಸಂಪರ್ಕ ಕಲ್ಪಿಸಲು ಬಾಕಿಯಿದ್ದು, ವಿದ್ಯುತ್ ಜಾಲದಿಂದ 500 ಮೀಟರ್ ಒಳಗಡೆ ಇರುವ ಪಂಪ್‌ಸೆಟ್‌ಗಳಿಗೆ ಮೂಲಭೂತ ಸೌಕರ್ಯಗಳೊಂದಿಗೆ ಟ್ರಾನ್ಸ್‌ಫಾರ್ಮರಗಳನ್ನು ಸಹ ಆಯಾಯ ಎಸ್ಕಾಂಗಳಿಂದಲೇ ಒದಗಿಸಲಾಗುವುದು.<br><br>3. ಹೊಸದಾಗಿ ಬೋರ್‌ವೆಲ್ ಕೊರೆದು ವಿದ್ಯುತ್ ಸಂಪರ್ಕ ಕೋರಿ ಅರ್ಜಿ ಸಲ್ಲಿಸಿದ ರೈತರು ಸ್ವಯಂ ನಿರ್ವಹಣೆಯಡಿ ಮೂಲಸೌಕರ್ಯ ಕಲ್ಪಿಸಿಕೊಳ್ಳುವುದು ಹಾಗೂ ಟ್ರಾನ್ಸ್‌ಫಾರ್ಮರಗಳನ್ನು ಅವಶ್ಯಕತೆಗನುಗುಣವಾಗಿ ಆಯಾಯ ಎಸ್ಕಾಂಗಳಿಂದಲೇ ಉಚಿತವಾಗಿ ಒದಗಿಸಲಾಗುವುದು. |

**ಸಂಖ್ಯೆ: ಎನರ್ಜಿ 301 ಇಬಿಎಸ್ 2025**

**(ಕೆ.ಜೆ.ಜಾರ್ಜ್)** 12/12/25

ಇಂಧನ ಸಚಿವರು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ.ಹೆಚ್.ಎಸ್.ಗೋಪಿನಾಥ್ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:970ಕ್ಕೆ ಅನುಬಂಧ:-1**

**ಗೃಹ ಜ್ಯೋತಿ ಯೋಜನೆಯಡಿ ಆಗಸ್ಟ್-2023 ರಿಂದ ಡಿಸೆಂಬರ್-2025 ರವರೆಗೆ ಅರ್ಹ ಗ್ರಾಹಕರು ಬಳಸಿರುವ ವಿದ್ಯುತ್ ಪ್ರಮಾಣ ಹಾಗೂ ಸರ್ಕಾರವು ಭರಿಸಿರುವ ಸಹಾಯಧನ ಮೊತ್ತದ ವಿವರ**

| ಮಾಹೆ | ವಿದ್ಯುತ್ ಬಳಕೆ (ಮಿ.ಯೂ) | ಸರ್ಕಾರ ಭರಿಸಿರುವ ಸಹಾಯಧನ ಮೊತ್ತ (ರೂ. ಕೋಟಿಗಳಲ್ಲಿ) |
|---|---|---|
| ಆಗಸ್ಟ್-23 | 606.69 | 650.00 |
| ಸೆಪ್ಟೆಂಬರ್-23 | 704.42 | 750.00 |
| ಅಕ್ಟೋಬರ್-23 | 724.35 | 750.00 |
| ನವಂಬರ್-23 | 746.66 | 750.00 |
| ಡಿಸೆಂಬರ್-23 | 767.40 | 750.00 |
| ಜನವರಿ-24 | 777.73 | 750.00 |
| ಫೆಬ್ರುವರಿ-24 | 816.45 | 673.60 |
| ಮಾರ್ಚ್-24 | 839.84 | 756.40 |
| **ಒಟ್ಟು** | **5,983.54** | **5,830.00** |
| ಏಪ್ರಿಲ್-24 | 811.93 | 803.00 |
| ಮೇ-24 | 815.65 | 803.00 |
| ಜೂನ್-24 | 821.91 | 804.00 |
| ಜುಲೈ-24 | 815.39 | 604.00 |
| ಆಗಸ್ಟ್-24 | 802.04 | 646.00 |
| ಸೆಪ್ಟೆಂಬರ್-24 | 824.84 | 700.00 |
| ಅಕ್ಟೋಬರ್-24 | 821.57 | 804.73 |
| ನವಂಬರ್-24 | 826.09 | 804.73 |
| ಡಿಸೆಂಬರ್-24 | 831.26 | 804.73 |
| ಜನವರಿ-25 | 826.60 | 804.73 |
| ಫೆಬ್ರುವರಿ-25 | 818.79 | 810.00 |
| ಮಾರ್ಚ್-25 | 793.52 | 768.74 |
| **ಒಟ್ಟು** | **9,809.61** | **9,157.66** |
| ಏಪ್ರಿಲ್-25 | 820.35 | 841.00 |
| ಮೇ-25 | 821.89 | 841.00 |
| ಜೂನ್-25 | 828.23 | 720.00 |
| ಜುಲೈ-25 | 832.23 | 750.00 |
| ಆಗಸ್ಟ್-25 | 799.41 | 750.00 |
| ಸೆಪ್ಟೆಂಬರ್-25 | 796.17 | 750.00 |
| ಅಕ್ಟೋಬರ್-25 | 806.09 | 800.00 |
| ನವಂಬರ್-25 (ಅಂದಾಜು) | 826.05 | 800.00 |
| ಡಿಸೆಂಬರ್-25 (ಅಂದಾಜು) | 829.92 | 800.00 |
| **ಒಟ್ಟು** | **7,360.34** | **7,052.00** |
| **ಒಟ್ಟಾರೆ** | **23,153.49** | **22,039.66** |

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ.ಹೆಚ್.ಎಸ್.ಗೋಪಿನಾಥ್ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:970ಕ್ಕೆ ಅನುಬಂಧ:-2

| ಸರ್ಕಾರವು ಗೃಹ ಜ್ಯೋತಿ ಯೋಜನೆಯಡಿಯಲ್ಲಿ ವಿದ್ಯುತ್ ಸರಬರಾಜು ಕಂಪನಿಗಳಿಗೆ ಬಿಡುಗಡೆ ಮಾಡಿರುವ ಸಹಾಯಧನ ಮೊತ್ತದ ವಿವರ (ಆಗಸ್ಟ್-2023 ರಿಂದ ಡಿಸೆಂಬರ್-2025 ರವರೆಗೆ) | | |
|---|---|---|
| | | ರೂ.ಕೋಟಿಗಳಲ್ಲಿ |
| ಕ್ರ.ಸಂ | ವಿದ್ಯುತ್ ಸರಬರಾಜು ಕಂಪನಿ | ಒಟ್ಟು ಮೊತ್ತ |
| 1 | ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ | 10,244.15 |
| 2 | ಮಂಗಳೂರು ವಿದ್ಯುತ್ ಸರಬರಾಜು ಕಂಪನಿ | 2,438.06 |
| 3 | ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ | 3,879.34 |
| 4 | ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ | 2,838.73 |
| 5 | ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ | 2,557.49 |
| 6 | ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘ | 81.89 |
| **7** | **ಒಟ್ಟು** | **22,039.66** |